O.S. No.245/2018 D.W. 1 Dated :04-07-2023.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಶ್ರೀ. ಕೆ.ಎನ್. ವಕೀಲರಿಂದಃ-

1 ನೇ ಪ್ರತಿವಾದಿಯ ಗಂಡನ ಹೆಸರು ಸೋಮಣ್ಣ. 1 ನೇ ಪ್ರತಿವಾದಿ ವಿವಾಹವಾದಾಗಿನಿಂದ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ. ಬೆಂಗಳೂರಿನ ವಿಳಾಸಕ್ಕೆ 1 ನೇ ಪ್ರತಿವಾದಿ ಆಧಾರ್ ಕಾರ್ಡನ್ನು ತೆಗೆದುಕೊಂಡಿರುತ್ತಾರೆ. ಜಲಜ ಕೆ. ಬಿನ್ ಕೃಷ್ಣೇಗೌಡ , ದೇವರಾಜನಹಳ್ಳಿ ಗ್ರಾಮ ಎಂದು 1 ನೇ ಪ್ರತಿವಾದಿಯ ಹೆಸರು ಮತ್ತು ವಿಳಾಸವನ್ನು ನಮೂದಿಸಿ ದಾನಪತ್ರ ಬರೆದುಕೊಟ್ಟಿರುತ್ತೇನೆ . 1 ನೇ ಪ್ರತಿವಾದಿಯು ದೇವರಾಜನಹಳ್ಳಿಯ ಗ್ರಾಮದವರಾಗಿರುವ ಬಗ್ಗೆ ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನನಗೆ ಈಗ ನೆನಪಿರುವುದಿಲ್ಲ. ನಿ.ಪಿ.2 ರಲ್ಲಿನ ಒಕ್ಕಣೆಯನ್ನು ನಾನೇ ಹೇಳಿ ಬರೆಸಿರುತ್ತೇನೆ. ನಿಪಿ-2 ರಲ್ಲಿ ನಾನು 35 ವರ್ಷಗಳಿಂದ ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುವ ಬಗ್ಗೆ ತಹಸೀಲ್ದಾರ್ ರವರು ನನ್ನ ಹೆಸರಿಗೆ ಖಾತೆ ವರ್ಗಾಯಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ಬರೆಸಿದ್ದೀರಾ ಎಂದರೆ , ಸಾಕ್ಷಿಯು ಏನು ಬರೆಸಿದ್ದೇನೆ ಎಂದು ನನಗೆ ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ವಂಶಪಾರಂಪರ್ಯವಾಗಿ ಬಂದಂತಹ ಸ್ವತ್ತನ್ನು ಪಿತ್ರಾರ್ಜಿತ ಸ್ವತ್ತು ಎಂದು ಕರೆಯುತ್ತಾರೆ ಎಂದರೆ ಸರಿ . ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ರೀತಿಯ ಹಕ್ಕಾಗಲೀ , ಅಧಿಕಾರವಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಯ ತಂದೆ ಬಸವೇಗೌಡರಿಗೆ ಮಂಜೂರಾದ ಸ್ವತ್ತು ಎಂದರೆ ಸರಿ , ಸಾಕ್ಷಿಯು ಮುಂದುವರಿದು ಸುಮಾರು 40 ವರ್ಷಗಳಿಂದ ದಾವಾ ಸ್ವತ್ತಿನಲ್ಲಿ ನಾನು ಸಾಗುವಳಿ ಮಾಡುತ್ತಿದ್ದು , ಇದುವರೆಗೂ ನನ್ನನ್ನು ಯಾರೂ ಪ್ರಶ್ನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯು ನಮ್ಮ ಕುಟುಂಬಕ್ಕೆ ಸೇರಿದವರಲ್ಲ ಎಂದರೆ ಸರಿ . ವಾದಿಯ ತಂದೆ ಬಸವೇಗೌಡರಿಂದಾಗಲೀ ಅಥವಾ ಅವರ ಮರಣ ಹೊಂದಿದ ನಂತರ ವಾದಿಯಿಂದಾಗಲೀ ಹಕ್ಕು ವರ್ಗಾವಣೆಯಾಗಿರುವಂತಹ ಯಾವುದೇ ರೀತಿಯ ದಾಖಲೆ ಪತ್ರಗಳನ್ನು ವಾದಿಯಿಂದಾಗಲೀ ವಾದಿಯ ಪೂರ್ವಜರಿಂದಾಗಲೀ ನಾನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ನಾನು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿರುವುದು

ವಾದಿಗೆ ತಿಳಿದಿತ್ತು ಎಂದು ನುಡಿಯುತ್ತಾರೆ. ನಾನು ವಾದಿಯ ವಿರುದ್ಧ ಪ್ರತಿಕೂಲ ಸ್ವಾಧೀನ ಕೇಳಿ ಯಾವುದೇ ರೀತಿ ದಾವೆ ಹೂಡಿರುವುದಿಲ್ಲ, ಎಂದರೆ ಸಾಕ್ಷಿಯು ವಾದಿಯು ನನ್ನ ಸ್ವಾಧೀನವನ್ನು ಪ್ರಶ್ನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯ ತಂದೆ, ಅವರ ಮರಣಾನಂತರ ವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತನ್ನು ದಾನಪತ್ರ ಮಾಡಲು ಯಾವುದೇ ಹಕ್ಕು , ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.